ಲೌಕಿಕರಿಗಿರುವ ಕಟ್ಟುಪಾಡುಗಳು ಅನ್ವಯವಾಗುವುದಿಲ್ಲ. ಭೂಮಿಯ ಗಂಧರ್ವರು ಅವರು. ಆದರೂ ಕೆಲವರ ಜೀವನಚರಿತ್ರೆ ಕೇಳುವಾಗ, 'ದೇಹ ಕೆಡಿಸಿಕೊಳ್ಳದಿದ್ದರೆ ಇನ್ನಷ್ಟು ಬದುಕಿ ತಮ್ಮ ಪ್ರತಿಭಾರಸದಿಂದ ಲೋಕವನ್ನು ತಣಿಸುತ್ತಿದ್ದರಲ್ಲ' ಎಂದು ಜೀವ ಹಳಹಳಿಸುತ್ತದೆ. ವ್ಯಸನಕ್ಕೆ ಬಿದ್ದು ಅಕಾಲಿಕ ಮರಣಕ್ಕೀಡಾದ ಅವರ ಹಿನ್ನೆಲೆಯಲ್ಲಿ ಯಾವೆಲ್ಲ ಮುರಿದ ಕನಸುಗಳೂ ಭಗ್ನಬಯಕೆಗಳೂ ಇದ್ದವೊ ಏನೊ? ಆದರೂ ತಮ್ಮ ವ್ಯಸನ ಕಲಾಭಿವ್ಯಕ್ತಿಗೆ ತೊಡಕಾಗಿ ಅಭಿಮಾನಿಗಳ ರಸಭಂಗವಾಗದಂತೆ ಅವರು ಜಾಗ್ರತೆ ವಹಿಸುವುದು ಉಚಿತ. ನಾನು ಮೈಸೂರಲ್ಲಿ ಕಲಿಯುವ ಕಾಲಕ್ಕೆ, ಅರಮನೆ ಸಭಾಂಗಣದಲ್ಲಿ ಭೀಮಸೇನರ ಕಛೇರಿಯಿತ್ತು. ಆಸೆಪಟ್ಟು ಹೋಗಿದ್ದೆ. ಚಿತ್ತಾಗುವಷ್ಟು ಕುಡಿದಿದ್ದ ಅವರಿಗೆ ಒಂದು ಚೀಸನ್ನೂ ಮುಗಿಸಲಾಗಲಿಲ್ಲ. ಇವರಿಗಿಂತ ಹೆಚ್ಚಿನ ಪಾನಪ್ರಿಯರಾಗಿದ್ದ ಕೊಳಲುವಾದಕ ಟಿ.ಆರ್. ಮಹಾಲಿಂಗಂ ವಿಷಯವೇ ಬೇರೆ. ಪ್ರಾಣೋತ್ಕ್ರಮಣ ಸ್ಥಿತಿಯಲ್ಲಿರುವ ರೋಗಿಯನ್ನು ಎಮರ್ಜನ್ಸಿ ವಾರ್ಡಿಗೆ ತರುವಂತೆ ಸಹಾಯಕರು ಅವರನ್ನು ಕಾರಿನಿಂದ ಎಳೆದುತಂದು, ಹಸಿಬಟ್ಟೆ ತುಂಬಿದ ಮೂಟೆಯಂತೆ ವೇದಿಕೆ ಮೇಲಿರಿಸುತ್ತಿದ್ದರು. ಆತ ಕೊಳಲನ್ನು ತುಟಿಗಿಟ್ಟು ಉಸಿರು ಬಿಡಲಾರಂಭಿಸಿದರೆ ಕಲಿಯುಗ ದ್ವಾಪರವಾಗಿ ಸಭೆ ರಾಸಲೀಲೆಯ ಬೃಂದಾವನ ಆಗುತ್ತಿತ್ತು.

ಕಲಾವಿದರಿಗಿರುವಂತೆ ಪಾನಕಲಂಕದ ಕಲೆಗಳು ಬುದ್ಧಿಜೀವಿಗಳಿಗೂ ಅಂಟಿವೆ. ಅವರು ಬಾರುಗಳಲ್ಲಿ ಕುಡಿಯುತ್ತ ಸಮಾಜದ ಬಗ್ಗೆ ಚರ್ಚಿಸುವವರು ಎಂಬ ಟೀಕೆಯಿದೆ. ವಾಸ್ತವವೇನೇ ಇರಲಿ, ಪಾನಿಗಳು ಸಂಪ್ರದಾಯ ವಿರೋಧಿಗಳಾಗಿರುವುದು ಮಾತ್ರ ದಿಟ. 'ಸಂಸ್ಕಾರ' ಕಾದಂಬರಿಯ ನಾರಣಪ್ಪ ಇದಕ್ಕೆ ಒಳ್ಳೇ ನಿದರ್ಶನ. ಸಿನಿಮಾದಲ್ಲಿ ಅವನ ಪಾತ್ರವನ್ನು ಲಂಕೇಶರೇ ನಿರ್ವಹಿಸಿದ್ದು ಅವರ ಸ್ವಆಯ್ಕೆಯೊ ಅವರಿಗಾಗದವರ ಫಿತೂರಿಯೊ ಗೊತ್ತಿಲ್ಲ. ಮೀನಾಕುಮಾರಿ, ಗಾಲಿಬ್, ಖುಶವಂತ ಸಿಂಗ್, ಅನಕೃ, ಬಿ.ವಿ. ಕಾರಂತ–ಪಾನಪ್ರಿಯರ ಪಟ್ಟಿಮಾಡಲು ಕುಳಿದರೆ ಮೈಲುದ್ದ ಹಾಳೆ ಬೇಕು. 'ಎಲೇ ಖಾಜಿ, ನಿನ್ನ ಪ್ರಾರ್ಥನೆಯ ಬಲದಿಂದ ಮಸೀದಿಯ ಮೀನಾರುಗಳನ್ನು ಅಲ್ಲಾಡಿಸು. ಇಲ್ಲವೇ ಎರಡು ತೊಟ್ಟುಕುಡಿದು ನೋಡು, ಮೀನಾರು ಅಲ್ಲಾಡುವುದನ್ನು' ಎಂದು ಗಾಲಿಬ್ ಸಂಪ್ರದಾಯಸ್ಥರನ್ನು ಬೆಚ್ಚಿಸಿದ. ಈಗಲೂ ಪಾನಗೃಹಗಳಲ್ಲಿ ಉಮರ ಖಯಾಮನು ಕವಿತೆ ಪುಸ್ತಕವನ್ನು ಎದುರಿಟ್ಟುಕೊಂಡು ವಾದ್ಯ ನುಡಿಸುತ್ತಿರುವ, ಬದಿಯಲ್ಲಿ ಸಖಿಯೊಬ್ಬಳು ಬಟ್ಟಲು ಹಿಡಿದು ಕುಳಿತಿರುವ ಚಿತ್ರಗಳನ್ನು ತೂಗುಹಾಕಲಾಗಿದೆ. ಸೂಫಿಕಾವ್ಯದಲ್ಲಿ ಪಾನಪ್ರತಿಮೆಗಳಿಗೆ ಬೇರೆಯದೇ ಅರ್ಥವಿದೆ. ಆಯಸ್ಸಿನಲ್ಲೊಮ್ಮೆ ಮುಖಾಮುಖಿ ಮಾಡಲೇಬೇಕಾದ ಕಠೋರಮೃತ್ಯುವಿನ ಸಮ್ಮುಖದಲ್ಲಿ ಬಾಳನ್ನು ಉತ್ಕಟವಾಗಿ ಅನುಭವಿಸಬೇಕು ಎಂಬರ್ಥದಲ್ಲಿ ಖಯಾಂ ಪಾನಜಗತ್ತಿನ ವಿವರಗಳನ್ನು ರೂಪಕವಾಗಿಸಿದ.

ಪಾನಿಗಳಲ್ಲಿ ಎರಡು ಬಗೆ: ಹವ್ಯಾಸಿ–ವ್ಯಸನಿ. ಹವ್ಯಾಸಿಗಳು ಅವಕಾಶ ಸಿಕ್ಕಾಗ ಕಬಳಿಸುವ ಉಂಡುಪವಾಸಿ ಬಳಸಿಬ್ರಹ್ಮಚಾರಿಗಳು. ವ್ಯಸನಿಗಳೊ ರವಿ ಕೆಂಪಾಗಿ ಪಡುವಣ ಕಡಲಿಗೆ ಸಲ್ಲತೊಡಗಿದೊಡನೆ ಇವತ್ತಿನ ಬಾಬತ್ತು ಹೇಗೆಂದು ಮಿಡುಕುತ್ತ, ತಕ್ಕ ದಾನಿಯ ಇಲ್ಲವೆ ಸಂಗಾತಿಯ ತಲಾಶಿಗೆ ತೊಡಗುವವರು. ಶುಷ್ಕದೇಶವಾದರೆ ತುರಿಸು ಇಮ್ಮಡಿಗೊಳ್ಳುತ್ತದೆ. ತಲೆಕೆಟ್ಟು ಹನ್ನೆರಡಾಣೆಯಾಗುತ್ತದೆ. ಮರುಭೂಮಿಯಲ್ಲಿ ಬೇಟೆಗಾರ ಪ್ರಾಣಿ ನಾನಾ ಉಪಾಯ ಹೂಡುವಂತೆ ಬುದ್ಧಿ ಓಡತೊಡಗುತ್ತದೆ. ಶಿವಮೊಗ್ಗೆಯಲ್ಲಿದ್ದಾಗ ನಮ್ಮ ಬಡಾವಣೆಯ ಒಬ್ಬ ಚಟಗಾರ ಸಾರಾಯಿ ಖರ್ಚಿಗೆ ಕಂಡುಕೊಂಡ ಉಪಾಯ